

ಕನ್ನಡ ನವೋದಯ ಸಾಹಿತ್ಯದ ನವನೀತದ ರೂಪದಲ್ಲಿ ಗುರ್ತಿಸಬಹುದಾದ ಪ್ರಮುಖ ಸಾಹಿತಿಗಳಲ್ಲಿ ಸಾಲಿ ರಾಮಚಂದ್ರ ರಾಯರೂ (ಅ. 10, 1888 – ಅ. 31, 1978) ಒಬ್ಬರು. ಬೆಳಗಾವಿ ಜಿಲ್ಲೆಯ ರಾಮದುರ್ಗ ಅವರ ತವರು. ರಾಷ್ಟ್ರೀಯತೆ ಮತ್ತು ಕನ್ನಡ ರಾಷ್ಟ್ರೀಯತೆಗಳನ್ನು ಒಟ್ಟಂದದಲ್ಲಿ ನೋಡಿದ ಕವಿಗಳ ಸಾಲಿಗೆ ಸೇರುವ ಸಾಲಿಯವರು, ಹಲವು ಭಾಷೆಗಳ ಒಡನಾಟ ಹೊಂದಿದ್ದರು. ಕನ್ನಡದೊಂದಿಗೆ ಸಂಸ್ಕೃತದಲ್ಲೂ ಅವರಿಗೆ ಹಿಡಿತವಿತ್ತು. ಪಾಲಿ, ಫ್ರೆಂಚ್, ಮರಾಠಿ, ಬೆಂಗಾಲಿ, ಗುಜರಾತಿ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳ ಪರಿಚಯ ಆವರಿಗಿತ್ತು. ಸ್ವಾತಂತ್ರ್ಯದ ತೊರೆಗೆ ಸಾಲಿಯವರ ಬೊಗಸೆಪಾಲೂ ಸೇರಿಕೊಂಡಿತ್ತು. ಗಾಂಧಿ ಮತ್ತು ತಿಲಕರು ಅವರಿಗೆ ಅಚ್ಚುಮೆಚ್ಚು. ಗಾಂಧೀಜಿ ಅವರ ಆತ್ಮಕಥೆಯನ್ನು ಕನ್ನಡಕ್ಕೆ ಅನುವಾದಿಸಿದ್ದರು (ಅಪ್ರಕಟಿತ). ಅವರ ಪುತ್ರ ಸತ್ಯಾಗ್ರಹಕ್ಕೆ ತೆರಳಿಬಂದು ಅನಾರೋಗ್ಯಪೀಡಿತನಾಗಿ ಸಾವಿಗೀಡಾಗಿದ್ದ. ರಾಮಾಯಣ ಮಹಾಕಾವ್ಯದ ಎರಡು ಸಂಪುಟಗಳನ್ನು ಅವರು ಪ್ರಕಟಿಸಿದ್ದರು. ಸಾಲಿ ರಾಮಚಂದ್ರ ರಾಯರ ಸಮಗ್ರಕಾವ್ಯವನ್ನು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಸಂಪಾದಿಸಿದ್ದಾರೆ. ‘ಕುಸುಮಾಂಜಲಿ’, ‘ಚಿತ್ರಸೃಷ್ಟಿ’, ‘ಅಭಿಸಾರ’, ‘ಸಿಪಾಯವ್ವ’, ‘ಜಯಗುರುದೇವ’, ‘ಯದುಪತಿ’, ‘ಸುಕನ್ಯಾ’ ಅವರ ಕೆಲವು ಕೃತಿಗಳು. ಕನ್ನಡದ ಮೊದಲ ಶೋಕಕಾವ್ಯ ಎಂದು ವಿಮರ್ಶಕರು ಗುರ್ತಿಸಿರುವ ‘ತಿಲಾಂಜಲಿ’ ನೀಳ್ಗವಿತೆ.